ಈ ಲೇಖನದ ವಿಷಯಾನುಕ್ರಮಣಿಕೆ


ಶ್ರೀಮದಾಚಾರ್ಯರ ವೃಂದಾವನವಿಲ್ಲ 2

ಶ್ರೀಮಧ್ವವಿಜಯ ಉತ್ಪ್ರೇಕ್ಷೆಗಳ ಗ್ರಂಥವಲ್ಲ. ಅದು ಪರಿಶುದ್ಧ ಇತಿಹಾಸದ ಗ್ರಂಥ 4

ಆಚಾರ್ಯರು ದೇಹತ್ಯಾಗವನ್ನೇ ಮಾಡಿಲ್ಲ 9

ಶ್ರೀ ಹೃಷೀಕೇಶತೀರ್ಥರ ವಚನ 11

ಶ್ರೀ ವಾದಿರಾಜತೀರ್ಥರ ವಚನ 13

ಆಚಾರ್ಯರು “ಇಂದಿಗೂ ಇದ್ದಾರೆ” 14

ಆಚಾರ್ಯರ ದೇಹದ ಆಯುಷ್ಯ 36000 ಸಾವಿರ ವರ್ಷಗಳು 16

ಸಶರೀರ ವೃಂದಾವನ ಪ್ರವೇಶ ಯಾಕೆ ಮಾಡಿರಬಾರದು 19

ಮಠಾಡೀಪುಸ್ತಕದ ಕುರಿತು 25

ಅದು ವೃಂದಾವನ ಎಂದು ನಿಶ್ಚಯ ಮಾಡುವ ಕುರಿತು 27

ಹಾಗಾದರೆ ಆ ವೃಂದಾವನ ಯಾರದಿರಬಹುದು 31

ಕಡೆಯಲ್ಲೊಂದು ಮಾತು 32

# ಶ್ರೀಮದಾಚಾರ್ಯರ ವೃಂದಾವನವಿಲ್ಲ

ಆಚಾರ್ಯರ ವೃಂದಾವನ ಇದೆ ಎಂದು ನೂರು ವರ್ಷದ ಹಿಂದಿನ ಮರಾಠೀ ಪುಸ್ತಕವೊಂದರಲ್ಲಿ ಇದೆಯೆಂದೂ, ಶ್ರೀ ಬದರೀಕ್ಷೇತ್ರದ ಬಳಿಯಿರುವ



ಶ್ರೀ ಮಧ್ವಾಚಾರ್ಯರ ವೃಂದಾವನ ಇದೆಯೇ?


ಶ್ರೀ ಮಧ್ವಾಚಾರ್ಯರ ವೃಂದಾವನ ಇದೆಯೇ?

ಮಾನಾದ ಬಳಿಯಲ್ಲಿ ಒಂದು ಆಯತಾಕಾರದ ಸಮಾಧಿ ಇದೆ. ಅದನ್ನು ಸಾಧುಪುರುಷರ ಸಮಾಧಿ ಎಂದು ಅಲ್ಲಿನವರು ಹೇಳುತ್ತಾರೆ, ಅದೇ ಶ್ರೀಮದಾಚಾರ್ಯರ ವೃಂದಾವನ ಎಂದು ತೋರುತ್ತದೆ ಎಂದು ಡಾ|| ರಾಘವೇಂದ್ರ ಕಟ್ಟಿಯವರು ಲೇಖನವನ್ನು ಬರೆದಿದ್ದಾರೆ.

ಆಚಾರ್ಯರ ವೃಂದಾವನವಿದೆಯೇ ಎಂಬ ಪ್ರಶ್ನೆಗೆ ನಮ್ಮ ಪ್ರಾಚೀನ ಆಚಾರ್ಯರು ನೀಡಿರುವ ಉತ್ತರದ ವಿವರಣೆ ಈ ಲೇಖನ.

## ಶ್ರೀಮಧ್ವವಿಜಯ ಉತ್ಪ್ರೇಕ್ಷೆಗಳ ಗ್ರಂಥವಲ್ಲ. ಅದು ಪರಿಶುದ್ಧ ಇತಿಹಾಸದ ಗ್ರಂಥ

ಮೊದಲಿಗೆ ಆ ಲೇಖನದಲ್ಲಿ ಶ್ರೀಮಧ್ವವಿಜಯ ವರ್ಣನೆಯ ಗ್ರಂಥ, ಕಾವ್ಯದ ಶೈಲಿಗಾಗಿ ನಾರಾಯಣಪಂಡಿತಾಚಾರ್ಯರು ಉತ್ಪ್ರೇಕ್ಷೆ ಮಾಡಿದ್ದಾರೆ ಎಂದೆಲ್ಲ ಹೇಳಲಾಗಿದೆ. ಶ್ರೀ ಮಧ್ವವಿಜಯದ ಅಧ್ಯಯನ ಮಾಡದೇ ಇರುವ ಮಂದಿ ಮಾತ್ರ ಈ ರೀತಿ ಹೇಳಲು ಸಾಧ್ಯ. ಮಧ್ವವಿಜಯ ಐತಿಹಾಸಿಕ ಕಾವ್ಯ.

ಶ್ರೀರಾಮ ಶಿವಧನುಷ್ಯವನ್ನು ಮುರಿದ ಎನ್ನುವದು ವಾಸ್ತವಿಕವಾಗಿ ನಡೆದ ಘಟನೆ. ಪರಮಾತ್ಮನ ಮಾಹಾತ್ಮ್ಯವನ್ನು ಮನಗಾಣಿಸಲು ಶ್ರೀಮದಾಚಾರ್ಯರೇ ದೃಷ್ಟಾಂತ ನೀಡಿ ವರ್ಣನೆ ಮಾಡುತ್ತಾರೆ — **“ಯಥೇಕ್ಷುದಂಡಂ ಶತಮನ್ಯುಕುಂಜರಃ”** ಎಂದು. ಐರಾವತ ಕಬ್ಬಿನಜಲ್ಲೆಯನ್ನು ಮುರಿದಂತೆ ಪರಮಾತ್ಮ ಶಿವಧನುವನ್ನು ಮುರಿದ ಎಂದು. ಮನುಷ್ಯರೇ ಕೈಯಲ್ಲಿ ಹಿಡಿದು ಮುರಿಯಬಹುದಾದ ಕಬ್ಬಿನ ಜಲ್ಲೆಯನ್ನು ಸಾಮಾನ್ಯವಾದ ಆನೆಯೇ

ಲೀಲೆಯಿಂದ ಮುರಿಯುತ್ತದೆ. ಅಂತಹುದರಲ್ಲಿ ಜೀವಪ್ರಪಂಚದ ಸಕಲ ಆನೆಗಳಲ್ಲಿಯೂ ಬಲಿಷ್ಠವಾದ ಐರಾವತ ಅದೆಷ್ಟು ಲೀಲಾಜಾಲವಾಗಿ ಕಬ್ಬಿನಜಲ್ಲೆಯನ್ನು ಮುರಿಯಿಲಿಕ್ಕಿಲ್ಲ?

ಶಿವಧನುಷ್ಯವನ್ನು ಹೆದೆಯೇರಿಸಲು ದೇವತೆಗಳಿಗೂ ಸಾಧ್ಯವಿಲ್ಲ ಹೀಗಾಗಿ ರಾಮನೂ ಕಷ್ಟಪಟ್ಟು ಅದನ್ನು ಮುರಿದಿರಬಹುದು ಎಂಬ ಸಂದೇಹಕ್ಕೆ ಆಚಾರ್ಯರು ನೀಡಿದ ಉತ್ತರವಿದು. ಮಹಾಶಕ್ತಿಯ ಐರಾವತಕ್ಕೆ ಒಂದು ಕಬ್ಬಿನಜಲ್ಲೆಯನ್ನು ಮುರಿಯುವದು ಎಷ್ಟು ಅನಾಯಾಸವೋ ಆ ರೀತಿಯಾಗಿ (ಅದೇ ರೀತಿಯಾಗಿ ಅಲ್ಲ, ಅದಕ್ಕಿಂತಲೂ ಸುಲಭವಾಗಿ, ಶ್ರೀಮದಾಚಾರ್ಯರ ಭಾಗವತತಾತ್ಪರ್ಯದ ಮತ್ತೊಂದು ವಚನದಿಂದ ಸಿದ್ಧವಾಗುವ ತತ್ವವಿದು) ರಾಮಚಂದ್ರ ಶಿವಧನುಷ್ಯವನ್ನು ಮುರಿದ ಎಂದು.

ಹೀಗೆ, ವಾಸ್ತವಿಕವಾದ ಘಟನೆಯನ್ನು ನಿರೂಪಣೆ ಮಾಡಬೇಕಾದರೆ, ಬರುವ ಸಂದೇಹಗಳಿಗೆ ಉತ್ತರ ನೀಡಲು, ಕೇಳುಗರ ಮನಸ್ಸಿನಲ್ಲಿ ತತ್ವ ಸ್ಥಿರವಾಗಿ ನೆಲೆಯೂರಲು ಮಹಾನುಭಾವರು

ದೃಷ್ಟಾಂತಗಳನ್ನು ವರ್ಣನೆಗಳನ್ನು ಬಳಸುತ್ತಾರೆ. ಶ್ರೀಮದಾಚಾರ್ಯರೂ ಸಹ ಬಳಸುತ್ತಾರೆ. ಹೀಗಾಗಿ ವರ್ಣನೆ ಇದೆ ಎಂದ ಮಾತ್ರಕ್ಕೆ ಅದು ಅವಾಸ್ತವವೆಂದಲ್ಲ.

ಇನ್ನು ಮಧ್ವವಿಜಯದಲ್ಲಿ ಕಾವ್ಯದ ಶೋಭೆಗಾಗಿ, ಗುರುಗಳ ಕೀರ್ತಿ ಹಬ್ಬಲಿ ಎನ್ನುವ ಕಾರಣಕ್ಕಾಗಿ ಸುಳ್ಳು ಕಥೆಗಳನ್ನು ಹೇಳಿಲ್ಲ ಎಂದು ಸ್ವಯಂ ಶ್ರೀ ನಾರಾಯಣಪಂಡಿತಾಚಾರ್ಯರೇ ತಮ್ಮ ಭಾವಪ್ರಕಾಶಿಕೆಯಲ್ಲಿ ಹೇಳುತ್ತಾರೆ —

**ಕಾವ್ಯಶ್ರಿಯೇ ವಾ ಗುರುಕೀರ್ತಯೇ ವಾ**
**ಪ್ರೋಕ್ತಂ ಸ್ವಯೈವಾಪಿ ಮನೀಷಯೇತಿ ।**
**ತಸ್ಮಾನ್ನ ಶಂಕ್ಯೇತ ಮಹಾಜನೇನ**
**ಪುಂಸಾ ಕುಶಾಗ್ರೀಯಧಿಯಾಽಪ್ಯವ್ಯಶ್ಯಮ್ ।।**

ನನ್ನ ಗ್ರಂಥಕ್ಕೆ ಸೊಬಗೊದಗಿ ಬರಲಿ ಎಂದು, ನನ್ನ ಗುರುಗಳು ಪ್ರಸಿದ್ಧರಾಗಲಿ ಎಂದು ನಾನೇ ಕಥೆಗಳನ್ನು ಕಲ್ಪಿಸಿ ಹೇಳಿಲ್ಲ. ಹೀಗಾಗಿ ಹಿರಿಯರು, ನಿಶಿತ ಬುದ್ಧಿಯ ಜನರು ಈ ವಿಷಯದಲ್ಲಿ ಸಂಶಯ ಪಡುವ ಅವಕಾಶವಿಲ್ಲ.  (ಶ್ರೀ ಮಧ್ವವಿಜಯದ

ಉಪನ್ಯಾಸದಲ್ಲಿ ಎಲ್ಲೆಲ್ಲಿ ಸಾಮಾನ್ಯ ಜನರಿಗೆ ಸಂದೇಹ ತೋರುತ್ತದೆಯೋ ಆ ಎಲ್ಲ ಪ್ರಸಂಗಗಳಲ್ಲಿ ಆ ಘಟನೆಗೆ ಶಾಸ್ತ್ರೀಯ ಆಧಾರವನ್ನು ನೀಡಿ ಸಮರ್ಥಿಸಿದ್ದೇನೆ, ಕೇಳಿ)

ಶ್ರೀ ನಾರಾಯಣಪಂಡಿತಾಚಾರ್ಯರು ಇಷ್ಟು ಸ್ಪಷ್ಟವಾಗಿ, ಮತ್ತು ತಾವು ಕಥೆಗಳನ್ನು ಹೇಗೆ ತಿಳಿದೆವು, ಗ್ರಂಥದಲ್ಲಿ ಸೇರಿಸುವದಕ್ಕಿಂತ ಮುಂಚೆಯ ಏನೆಲ್ಲ ಎಚ್ಚರಗಳನ್ನು ವಹಿಸಿದೆವು ಎನ್ನುವದನ್ನು ತಿಳಿಸಿದಾಗ ಅದೊಂದು ವರ್ಣನೆಯ ಗ್ರಂಥ ಎಂದು ದೂಷಿಸುವದು ನಮ್ಮ ಅಜ್ಞಾನವನ್ನು ಸೂಚಿಸುತ್ತದೆ.

ಎಲ್ಲದಕ್ಕಿಂತ ಮುಖ್ಯವಾಗಿ ಶ್ರೀಮಧ್ವವಿಜಯವನ್ನು ಅರ್ಥ ಮಾಡಿಕೊಳ್ಳದೇ, ಇಡಿಯ ಸಂಸ್ಕೃತಸಾಹಿತ್ಯದಲ್ಲಿಯೇ ಅತ್ಯಪೂರ್ವವಾದ ಐತಿಹಾಸಿಕಕಾವ್ಯವನ್ನು ಒಬ್ಬ ಮಾಧ್ವರೇ ಅಪಾರ್ಥಯುಕ್ತವಾಗಿ ಜನರ ಮಧ್ಯದಲ್ಲಿ ಬಿಂಬಿಸಿದ್ದು ನಮ್ಮ ಮಾಧ್ವರಲ್ಲಿ ವಿದ್ಯೆಯ ಅವನತಿಯಾಗುತ್ತಿದೆ ಎನ್ನುವದನ್ನು ಸಾಬೀತುಪಡಿಸುತ್ತದೆ. ಶ್ರೀಮಧ್ವವಿಜಯ ಮಾಧ್ವರ

ಮಾಂಗಲ್ಯ. ಅದರ ಬಗ್ಗೆ ಅವಹೇಳನಕಾರಿಯಾದ ಮಾತುಗಳು ಬಂದದ್ದು ನಿಜವಾದ ದೌರ್ಭಾಗ್ಯ.

ಮತ್ತು ಮಧ್ವವಿಜಯಕ್ಕೂ, ಈ ಸಮಾಧಿಗೂ ಯಾವ ಸಂಬಂಧ ಸಹಿತ ಇಲ್ಲ.  ಆಚಾರ್ಯರು ದೇಹತ್ಯಾಗ ಮಾಡಿ ವೃಂದಾವನ ಇದ್ದರೂ ಮಧ್ವವಿಜಯಕ್ಕೆ ವಿರೋಧವಿಲ್ಲ. ಆಚಾರ್ಯರು ದೇಹತ್ಯಾಗ ಮಾಡದೆ ಇಂದಿಗೂ ಬದಿರಕಾಶ್ರಮದಲ್ಲಿದ್ದರೂ ಮಧ್ವವಿಜಯದ ವಿರೋಧವಿಲ್ಲ.

ಕಾರಣ, ಶ್ರೀಮದಾಚಾರ್ಯರು ಅಂತ್ಯದಲ್ಲಿ ಬದರಿಕಾಶ್ರಮಪ್ರಯಾಣ ಮಾಡಿದ ಘಟನೆಯನ್ನೂ ಮಧ್ವವಿಜಯ ಉಲ್ಲೇಖಿಸುವದಿಲ್ಲ. ಆಚಾರ್ಯರು ದೇಹತ್ಯಾಗ ಮಾಡಿದರು ಎನ್ನುವದನ್ನೂ ಸಹ ಸರ್ವಥಾ ಮಧ್ವವಿಜಯ ಹೇಳಿಲ್ಲ. ಅದಕ್ಕೆ ಮುಖ್ಯ ಕಾರಣ, ಆಚಾರ್ಯರು ಜನರ ಮಧ್ಯದಲ್ಲಿದ್ದಾಗಲೇ ಮಧ್ವವಿಜಯ ರಚನೆಯಾಗಿದೆ ಎನ್ನುವದು. ಇದರ ಕುರಿತು ಸಂದೇಹ ಪಡುವವರಿಗೆ ಹದಿನಾರನೆಯ ಸರ್ಗದ “ನಮಸ್ತೇ ಪ್ರಾಣೇಶ” ಎಂಬ ಶ್ಲೋಕದ ಅನುವಾದ ಮಾಡಬೇಕಾದರೆ ಉತ್ತರ ನೀಡಿದ್ದೇನೆ.

ಆಚಾರ್ಯರ ಮೇಲೆ ಪುಷ್ಪವೃಷ್ಟಿಯಾಯಿತು, ಆ ಪುಷ್ಪವೃಷ್ಟಿಯ ಮಧ್ಯದಲ್ಲಿ ತುಲಸೀಶೋಭಿತರಾಗಿ ಆಚಾರ್ಯರು ಜನರಿಗೆಲ್ಲ ಕಂಡರು ಎಂದೇ ಪಂಡಿತಾಚಾರ್ಯರು ಭಾವಪ್ರಕಾಶಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದೇ ಹೂಗಳ  ಮಧ್ಯದಲ್ಲಿ ಆಚಾರ್ಯರು ಅದೃಶ್ಯರಾದರು ಎನ್ನುವದು ಕಪೋಲಕಲ್ಪಿತ ಘಟನೆ. ಅದಕ್ಕೆ ಎಲ್ಲಿಯೂ ಆಧಾರವಿಲ್ಲ.

## ಆಚಾರ್ಯರು ದೇಹತ್ಯಾಗವನ್ನೇ ಮಾಡಿಲ್ಲ

ಆಚಾರ್ಯರ ವೃಂದಾವನ ಇದೆ ಎನ್ನಬೇಕಾದರೆ ಆಚಾರ್ಯರು ದೇಹತ್ಯಾಗವನ್ನು ಮಾಡಿರಬೇಕು. ಈ ದೇಹತ್ಯಾಗ ಎರಡು ರೀತಿಯಾದದ್ದು. ಒಂದು ಸಶರೀರರಾಗಿ — ಅಂದರೆ ಬದುಕಿದ್ದಾಗಲೇ — ವೃಂದಾವನವನ್ನು ಪ್ರವೇಶ ಮಾಡಿ, ಯೋಗಶಕ್ತಿಯಿಂದ ಒಳಗೆ ದೇಹತ್ಯಾಗವನ್ನು ಮಾಡುವದು. ಗುರುಸಾರ್ವಭೌಮರಾದ ಶ್ರೀ ವಾದಿರಾಜತೀರ್ಥರು, ಶ್ರೀ ರಾಘವೇಂದ್ರತೀರ್ಥರು ಮಾಡಿದಂತೆ.

ಎರಡನೆಯದು ಎಲ್ಲರೆದುರಿಗೆ ದೇಹತ್ಯಾಗವನ್ನು ಮಾಡಿದ ನಂತರ ವೃಂದಾವನ ನಿರ್ಮಾಣ ಆಗುವದು. ಉಳಿದ ಯತಿಶ್ರೇಷ್ಠರ ವಿಷಯದಲ್ಲಿ ಜರುಗುವಂತೆ.

ಅಂತೂ ಎರಡೂ ಸಂದರ್ಭಗಳಲ್ಲಿ ದೇಹತ್ಯಾಗವುಂಟು. ಶ್ರೀಮದಾಚಾರ್ಯರು ದೇಹತ್ಯಾಗ ಮಾಡಿದರು ಎನ್ನುವದನ್ನು ಸಿದ್ಧವಾದರೆ ವೃಂದಾವನವಿದೆ ಎಂದು ನಿರ್ಣಯಿಸಬಹುದು.

ಹೇಗೆ ನಿರ್ಣಯಿಸುವದು? ನಾವು ನಿರ್ಣಯಿಸುವ ಆವಶ್ಯಕತೆಯಿಲ್ಲ, ನಮ್ಮ ಪರಂಪರೆಯ ಮಹಾಜ್ಞಾನಿಗಳಾದ ಶ್ರೀ ವಾದಿರಾಜಗುರುಸಾರ್ವಭೌಮರು ನಿರ್ಣಯಿಸಿದ್ದಾರೆ.

ಹಂತ ಹಂತವಾಗಿ ತತ್ವಗಳನ್ನು ತಿಳಿಯುತ್ತ ಹೋಗೋಣ.

## ಶ್ರೀ ಹೃಷೀಕೇಶತೀರ್ಥರ ವಚನ

ಶ್ರೀ ಮಧ್ವವಿಜಯ ಆಚಾರ್ಯರ ಕಾಲದಲ್ಲಿಯೇ ನಿರ್ಮಾಣವಾದ ಗ್ರಂಥವಾದ್ದರಿಂದ ಅದರಲ್ಲಿ ಆಚಾರ್ಯರ ಬದರಿಕಾಶ್ರಮಪ್ರವೇಶದ ಪ್ರಸಕ್ತಿ ಬರುವದಿಲ್ಲ. ಮತ್ತು, ಆಚಾರ್ಯರ ನಂತರ ನಿರ್ಮಾಣವಾಗಿದೆ ಎಂದು ಯಾರೇ ವಾದಿಸಿದರೂ, ಅದರಲ್ಲಿ ಆಚಾರ್ಯರು ಅದೃಶ್ಯರಾದರು, ವೃಂದಾವನಸ್ಥರಾದರು ಅಥವಾ ಬದರಿಕಾಶ್ರಮಪ್ರವೇಶ ಮಾಡಿದರು ಎಂದು ಯಾವ ವಿಷಯವನ್ನು ಹೇಳಿಲ್ಲವಾದ್ದರಿಂದ ಶ್ರೀ ಮಧ್ವವಿಜಯದ ಪ್ರಸಕ್ತಿ ಈ ಸಂದರ್ಭದಲ್ಲಿ ಬರುವದಿಲ್ಲ.

ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ಹೃಷೀಕೇಶತೀರ್ಥರು ಸಂಪ್ರದಾಯಪದ್ಧತಿ ಎಂಬ ಕೃತಿಯನ್ನು ರಚಿಸಿದ್ದಾರೆ. ಅದರಲ್ಲಿ ಹೃಷೀಕೇಶತೀರ್ಥರು ಆಚಾರ್ಯರು ತಮ್ಮ ಕಾರ್ಯವನ್ನು ಮುಗಿಸಿ ಹೊರಟರು ಎನ್ನುವ ವಿಷಯವನ್ನು ಹೇಳುವಾಗ

## “ಅಮಿತಮತಿಃ ಕ್ಷೇತ್ರತೋ ನಿರ್ಗತೋಽಭೂತ್”

ಎಂದು ಹೇಳಿದ್ದಾರೆ. ಇಲ್ಲಿ ಸ್ಪಷ್ಟವಾಗಿ ಆಚಾರ್ಯರು (ಉಡುಪಿ) ಕ್ಷೇತ್ರದಿಂದ ಹೊರಟರು ಎಂಬ ಮಾತಿದೆ. ಭೂಮಿಯನ್ನು ತೊರೆದರು, ದೇಹತ್ಯಾಗ ಮಾಡಿದರು ಎಂಬ ಮಾತಿಲ್ಲ, ವೃಂದಾವನಸ್ಥರಾದರು ಎಂಬ ಮಾತಿಲ್ಲ.

ಈ ಕೃತಿಯಲ್ಲಿ ಹಿಂದಿನ ಶ್ಲೋಕದ ವರೆಗೆ ಆಚಾರ್ಯರು ಮಾಡಿದ ಕಾರ್ಯ, ಶಿಷ್ಯರಿಗೆ ಉಪದೇಶ ತಿಳಿಸಿ ಮುಂದಿನ ಶ್ಲೋಕದಲ್ಲಿ ಶ್ರೀ ಮಧ್ವಾನುಜಾಚಾರ್ಯರು ಮುಂದೆ ಮಾಡಲಿರುವ ಕಾರ್ಯವನ್ನು ತಿಳಿಸುತ್ತಾರೆ. **ಹೀಗಾಗಿ ಆಚಾರ್ಯರ ಕಟ್ಟ ಕಡೆಯ ಕಾರ್ಯವನ್ನು ಹೇಳುವ ಸಂದರ್ಭದಲ್ಲಿ ನಿರ್ಯಾಣವನ್ನು ಹೇಳದೆ ನಿರ್ಗಮನವನ್ನು ಮಾತ್ರ ಹೇಳಿದ್ದಾರೆ ಎನ್ನುವದು ಅತ್ಯಂತ ಗಮನಾರ್ಹ.**

ಆಚಾರ್ಯರು ಉಡುಪಿಯಿಂದ ಹೊರಟರು ಎಂದಷ್ಟೇ ಇದೆ, ಇಲ್ಲಿ. ನಾವು ಹೇಳುತ್ತಿರುವದು ಆಚಾರ್ಯರ ವೃಂದಾವನ ಬದರಿಯಲ್ಲಿದೆ ಎಂದು.

ಹೀಗಾಗಿ ಆಚಾರ್ಯರು ಉಡುಪಿಯಿಂದ ಬದರಿಗೆ ಹೋದ ನಂತರ ಅಲ್ಲಿ ವೃಂದಾವನಸ್ಥರಾಗಿರಬಹುದಲ್ಲ ಎಂಬ ಪ್ರಶ್ನೆಗೆ ಶ್ರೀ ವಾದಿರಾಜಗುರುಸಾರ್ವಭೌಮರು **ಸರಸಭಾರತೀವಿಲಾಸದ ಸಪ್ತಮವಿಲಾಸ**ದಲ್ಲಿ ಉತ್ತರವನ್ನು ನೀಡುತ್ತಾರೆ —

## ಶ್ರೀ ವಾದಿರಾಜತೀರ್ಥರ ವಚನ

**ಅದ್ಯಾಪಿ ಬದರೀಶೈಲೇ**
**ಬದರೀಷಂಡಮಂಡಿತೇ ।**
**ಮಧ್ಯೇ ಮುನೀನಾಮಧ್ಯಾಸ್ತೇ**
**ವಿದ್ವಾನ್ ವ್ಯಾಸಸ್ಯ ಸನ್ನಿಧೌ ॥ 10 ॥**

ಶ್ರೀಮದಾಚಾರ್ಯರು ಬದರೀವೃಕ್ಷಗಳಿಂದ ಶೋಭಿತವಾದ ಬದರೀಯಲ್ಲಿ (ಶ್ರೀ ವ್ಯಾಸಬದರಿಯಲ್ಲಿ) ವೇದವ್ಯಾಸದೇವರ ಸನ್ನಿಧಾನದಲ್ಲಿ ಮುನಿಗಳ ಮಧ್ಯದಲ್ಲಿ ಆಚಾರ್ಯರು “ಇಂದಿಗೂ ಇದ್ದಾರೆ.” ಅದ್ಯಾಪಿ ಆಸ್ತೇ.

## ಆಚಾರ್ಯರು “ಇಂದಿಗೂ ಇದ್ದಾರೆ”

ಶ್ರೀಮದಾಚಾರ್ಯರು “ಇಂದಿಗೂ ಇದ್ದಾರೆ” ಎಂಬ ಶ್ರೀ ವಾದಿರಾಜಗುರುಸಾರ್ವಭೌಮರ ಮಾತೇ ಆಚಾರ್ಯರು ದೇಹತ್ಯಾಗ ಮಾಡಿಲ್ಲ, ವೃಂದಾವನಸ್ಥರಾಗಿಲ್ಲ ಎನ್ನುವದನ್ನು ತಿಳಿಸುತ್ತದೆ.

ಜೀವನಿಗೆ ಸಾವಿಲ್ಲ. ಹೀಗಾಗಿ ಸಾವಿನ ನಂತರವೂ ಜೀವ ಇದ್ದೇ ಇರುತ್ತಾನೆ. ಆದರೂ ಅವರು ಇಂದಿಗೂ ಇದ್ದಾರೆ ಎನ್ನುವದಿಲ್ಲ.

ಭೀಷ್ಮಾಚಾರ್ಯರು ದೇಹತ್ಯಾಗ ಮಾಡಿದ್ದಾರೆ. ಆದರೆ ಅವರು ದೇವಲೋಕದಲ್ಲಿ ಇದ್ದೇ ಇದ್ದಾರೆ. ಆದರೆ ನಾವು ಭೀಷ್ಮರು ಇಂದಿಗೂ ಇದ್ದಾರೆ ಎಂದು ಎಲ್ಲಿಯೂ ಹೇಳುವದಿಲ್ಲ. ಆದರೆ ಅಶ್ವತ್ಥಾಮಾಚಾರ್ಯರು ಇನ್ನೂ ದೇಹತ್ಯಾಗ ಮಾಡಿಲ್ಲ. ಮುಂದಿನ ದ್ವಾಪರಯುಗದಲ್ಲಿ ಅವರೇ ವೇದಪೀಠದ ಮೇಲೆ ಕುಳಿತು ವೇದಗಳ ವಿಭಾಗ ಮಾಡುತ್ತಾರೆ. ಹೀಗಾಗಿ ಅಶ್ವತ್ಥಾಮಾಚಾರ್ಯರು ಇಂದಿಗೂ ಇದ್ದಾರೆ ಎನ್ನುತ್ತೇವೆ.

ಹಾಗೆಯೇ ಹನುಮಂತನೂ ದೇಹತ್ಯಾಗ ಮಾಡಿಲ್ಲ. ಅವನು ಚಿರಂಜೀವಿ. ಇಂದಿಗೂ ಕಿಂಪುರುಷದಲ್ಲಿ ಇದ್ದಾನೆ ಎಂದೇ ಶಾಸ್ತ್ರ ಹೇಳುತ್ತದೆ — **"ಅಸಾವಿದಾನೀಂ ಚ ನಿಷೇವಮಾಣೋ ರಾಮಂ ಪತಿಂ ಕಿಂಪುರುಷೇ ಕಿಲಾಸ್ತೇ"** ಇದಾನೀಂ ಇಂದಿಗೂ ರಾಮನನ್ನು ಸೇವೇ ಮಾಡುತ್ತ ಹನುಮಂತದೇವರು ಕಿಂಪುರುಷೇ ಆಸ್ತೇ ಕಿಂಪುರುಷಖಂಡದಲ್ಲಿ ಇದ್ದಾರೆ.

ಹೀಗೆ ದೇಹತ್ಯಾಗ ಮಾಡದೇ ಇನ್ನೂ ಬದುಕಿರುವವರನ್ನು ಮಾತ್ರ ಇನ್ನೂ ಇದ್ದಾರೆ ಎಂದು ಪ್ರಯೋಗ ಮಾಡುತ್ತೇವೆಯೇ ಹೊರತು, ಸತ್ತ ಬಳಿಕ ಜೀವದ ಅಸ್ತಿತ್ವ ಇರುತ್ತದೆ, ಆ ಸಂದರ್ಭದಲ್ಲಿ ಆ ವ್ಯಕ್ತಿಯನ್ನು ಇನ್ನೂ ಇದ್ದಾರೆ ಎನ್ನುವದಿಲ್ಲ. ಜೀವ ಇದೆ. ಮತ್ತೊಂದು ಪ್ರದೇಶದಲ್ಲಿ ಹುಟ್ಟಿ ಇದ್ದಾನೆ ಎನ್ನುತ್ತೇವೆ. ಅಥವಾ ಸ್ವರ್ಗ ನರಕಗಳಲ್ಲಿ ಇದ್ದಾನೆ ಎನ್ನುತ್ತೇವೆ.

ಶ್ರೀಮದಾಚಾರ್ಯರು **"ಇಂದಿಗೂ ಬದರಿಯಲ್ಲಿ ಇದ್ದಾರೆ" "ಅದ್ಯಾಪಿ ಆಸ್ತೇ"** ಎಂಬ ಮಾತೇ ಶ್ರೀಮದಾಚಾರ್ಯರು ಜೀವಂತ ಇದ್ದಾರೆ,

ದೇಹತ್ಯಾಗ ಮಾಡಿಲ್ಲ ಎನ್ನುವದನ್ನು ಸ್ಪಷ್ಟವಾಗಿ ತಿಳಿಸುತ್ತದೆ.

## ಆಚಾರ್ಯರ ದೇಹದ ಆಯುಷ್ಯ 36000 ಸಾವಿರ ವರ್ಷಗಳು

ಇಷ್ಟೇ ಅಲ್ಲ, ಶ್ರೀಮದಾಚಾರ್ಯರ ದೇಹದ ಆಯುಷ್ಯ ದೇವತೆಗಳ ಲೆಕ್ಕದಲ್ಲಿ 100 ವರ್ಷ, (ನಮ್ಮ ಲೆಕ್ಕದಲ್ಲಿ 36000 ವರ್ಷ) ಎಂದು ಘಂಟಾಘೋಷವಾಗಿ ಶ್ರೀ ವಾದಿರಾಜರು ತಿಳಿಸುತ್ತಾರೆ —

**ಶರಚ್ಛತೇ ವ್ಯತೀತೇ ತು**
**ದೇವಾನಾಮಾಜ್ಞಯಾ ಪ್ರಭೋಃ ।**
**ಏಕತಾಂ ಮೂಲರೂಪೇಣ**
**ಲೋಕೇ ಸ್ವೀಯೇ ಗಮಿಷ್ಯತಿ ॥ 25 ॥**

ದೇವಾನಾಂ ಶರಚ್ಛತೇ ವ್ಯತೀತೇ ತು ಪ್ರಭೋಃ ಆಜ್ಞಯಾ ಮೂಲರೂಪೇಣ ಏಕತಾಂ ಸ್ವೀಯೇ ಲೋಕೇ ಗಮಿಷ್ಯತಿ.

ದೇವತೆಗಳ ಲೆಕ್ಕದಲ್ಲಿ ನೂರು ವರ್ಷಗಳು ಆದಾಗ ಶ್ರೀಹರಿಯ ಆಜ್ಞೆಯಂತೆ ತಮ್ಮ ಲೋಕವಾದ ಸತ್ಯಲೋಕದಲ್ಲಿ ಮೂಲರೂಪವಾದ ಮುಖ್ಯಪ್ರಾಣರೂಪದೊಂದಿಗೆ ಐಕ್ಯವನ್ನು ಹೊಂದುತ್ತಾರೆ.

36000 ಸಾವಿರ ವರ್ಷಗಳ ನಂತರ ಆಚಾರ್ಯರು ಮೂಲರೂಪದೊಂದಿಗೆ ಐಕ್ಯವನ್ನು ಹೊಂದುವಾಗ ದೇಹತ್ಯಾಗ ಮಾಡಲೇಬೇಕು. ಹಾಗಾದರೆ ಆಚಾರ್ಯರಿಗೂ ಸಾವು ಬಾಧಿಸುತ್ತದೆಯೇ ಎಂಬ ಪ್ರಶ್ನೆಗೆ ಶ್ರೀಮದ್ವಾದಿರಾಜರು ಅದ್ಭುತವಾಗಿ ಉತ್ತರಿಸುತ್ತಾರೆ —

**ಸ್ವಾನುಜಂ ವಿಷ್ಣುತೀರ್ಥಂ ಚ**
**ತಪಸಾ ಧೂತಕಲ್ಮಷಮ್ ।**
**ಪ್ರೇಷಯಿಷ್ಯತಿ ಸತ್ತತ್ವ**
**ಕಥನಾಯ ಕಲೌ ಕಿಲ ।**
**ಸ್ವಚ್ಛಂದಮೃತ್ಯುತಾ ವ್ಯಾಸ-**
**ಕೃಪಯಾಸ್ತ್ಯುಭಯೋಸ್ತಯೋಃ ।**

ತಮ್ಮ ಸೇವೆಯನ್ನು ಮಾಡಿ ಸಿದ್ಧಿಯನ್ನು ಗಳಿಸಿದ ಶ್ರೀ ಮಧ್ವಾನುಜಾಚಾರ್ಯರಿಗೇ ಆಚಾರ್ಯರು ದೀರ್ಘ ಆಯುಷ್ಯವನ್ನು ಕರುಣಿಸಿದ್ದಾರೆ. ಅಧ್ಯಯನ ನಿಂತುಹೋಗಿ ಆಚಾರ್ಯರ ಶಾಸ್ತ್ರ ಲುಪ್ತವಾದಾಗ ಅದನ್ನು ಪುನಃ ಪ್ರತಿಷ್ಠಾಪನೆ ಮಾಡಲು ತಮ್ಮ ತಮ್ಮ ಶ್ರೀ ವಿಷ್ಣುತೀರ್ಥರನ್ನು ಮತ್ತೆ ಕಳುಹಿಸಲು ಇಂದಿಗೂ ಅವರನ್ನು ಜೀವಂತವಿರಿಸಿ ಅವರಿಂದ ತಪಸ್ಸನ್ನು ಮಾಡಿಸುತ್ತಿದ್ದಾರೆ. ವೇದವ್ಯಾಸದೇವರ ಅನುಗ್ರಹದಿಂದ ಇಬ್ಬರೂ ಸ್ವಚ್ಛಂದಮೃತ್ಯುಗಳು ಅರ್ಥಾತ್ ಇಚ್ಛಾಮರಣಿಗಳು.

**ಶ್ರೀಮದಾಚಾರ್ಯರನ್ನು ಸ್ವಚ್ಛಂದಮೃತ್ಯು ಎಂದು ರಾಜರು ಕರೆಯುತ್ತಿದ್ದಾರೆ ಎಂದರೆ ಅವರಿಗಿನ್ನೂ ಮರಣ ಬಂದಿಲ್ಲ ಎಂದು ಸಿದ್ಧವಾಯಿತಲ್ಲವೇ. ದೇವಮಾನದಲ್ಲಿ 100 ವರ್ಷ ಕಳೆದ ಬಳಿಕ, ಪರಮಾತ್ಮ ಆಜ್ಞೆಯಂತೆ ದೇಹತ್ಯಾಗ ಮಾಡುತ್ತಾರೆ ಎಂದರೆ ಇನ್ನೂ ಅವರು ಜೀವಂತವಿದ್ದಾರೆ ಎನ್ನುವದು ನಿರ್ವಿವಾದವಾಗಿ ಸಿದ್ಧವಾಗುವದಿಲ್ಲವೇ?**

ಹೀಗೆ ಆಚಾರ್ಯರ ಆಯುಷ್ಯವೇ 36000 ವರ್ಷಗಳಾಗಿರುವಾಗ ಆಚಾರ್ಯರು ದೇಹತ್ಯಾಗ ಹೇಗೆ ಮಾಡಿರಲು ಸಾಧ್ಯ?

## ಸಶರೀರ ವೃಂದಾವನ ಪ್ರವೇಶ ಯಾಕೆ ಮಾಡಿರಬಾರದು

ಇಲ್ಲಿ ಮತ್ತೊಂದು ಪ್ರಶ್ನೆ ಮೂಡಬಹುದು — ಆಚಾರ್ಯರು ಸಶರೀರರಾಗಿಯೇ ವೃಂದಾವನ ಪ್ರವೇಶ ಮಾಡಿದ್ದಾರೆ. ವೃಂದಾವನ ಪ್ರವೇಶ ಮಾಡಿ ಅಲ್ಲಿಂದ ಬದರಿಯಲ್ಲಿ ವೇದವ್ಯಾಸದೇವರ ಸೇವೆ ಮಾಡುತ್ತಿದ್ದಾರೆ ಎಂದು ಒಪ್ಪಬಹುದಲ್ಲ ಎಂದು

ಅದಕ್ಕೆ ಉತ್ತರ —

ಆಚಾರ್ಯರು ಹೀಗೆ ಮಾಡಲು ಕಾರಣವೇನು ? ಗುರುಸಾರ್ವಭೌಮರಾದ ಶ್ರೀವಾದಿರಾಜರು ಮತ್ತು ಶ್ರೀ ರಾಯರು ತಮ್ಮ ವೃಂದಾವನವನ್ನು ಮೊದಲೇ ಮಾಡಿಸಿ ಅದರಲ್ಲಿ ದೇವತಾಸನ್ನಿಧಾನವನ್ನು ತುಂಬಿಸಿ ಆ ನಂತರ ತಾವು ಪ್ರವೇಶ ಮಾಡಿದರು. ಕಾರಣ ಆವರಿಗೆ ಭಕ್ತಕೋಟಿಯನ್ನು ಉದ್ಧರಿಸಬೇಕಾಗಿದೆ. ಇವತ್ತಿಗೂ ಸ್ವಾದಿ

ಮಂತ್ರಾಲಯಗಳಲ್ಲಿ ಸೇವೆ ಮಾಡಿದರಷ್ಟೇ ಅಲ್ಲ ಅವರ ಪರಮಮಂಗಳ ವೃಂದಾವನಗಳ ಸ್ಮರಣೆ ಮಾಡಿದರೂ ನಮ್ಮ ಕಾರ್ಯ ಕೆಲಸಗಳಾಗುತ್ತವೆ, ನಮ್ಮ ವಿಘ್ನಗಳು ದೂರಾಗುತ್ತವೆ. (ಸಾವಿರಾರು ಜನರ ಅನುಭವವೇ ಇದಕ್ಕೆ ಸಾಕ್ಷಿಯಿದೆ. ಶ್ರೀ ವಾದಿರಾಜರ ಬಳಿಯಲ್ಲಿ  ಭಕ್ತಿಯಿಂದ ಕಾಯಿ ಕಟ್ಟಿಕೊಂಡು ಸೇವೆ ಮಾಡಿದಲ್ಲಿ ಆಗದೇ ಇರುವ ಕೆಲಸವೇ ಇಲ್ಲ. ಅಂತಹ ದಿವ್ಯಾನುಗ್ರಹವನ್ನು ಅವರು ಆ ಪಂಚವೃಂದಾವನದಲ್ಲಿ ಕುಳಿತು, ಶ್ರೀ ರಾಯರು ಆ ಪರಮಾತ್ಮನ ಪಾದಸ್ಪರ್ಶ ಪಡೆದ ಶಿಲೆಯಿಂದ ನಿರ್ಮಿತವಾದ ವೃಂದಾವನದಲ್ಲಿ ಕುಳಿತು ಮಾಡುತ್ತಿದ್ದಾರೆ.)

ಅಂದರೆ ತಮ್ಮ ಭಕ್ತರು ತಮ್ಮನ್ನು ಆರಾಧಿಸಲು ಒಂದು ಅಧಿಷ್ಠಾನವಾಗಿ ಶ್ರೀಮದಾಚಾರ್ಯರು ನಮಗೆ ಅವರ ವೃಂದಾವನವನ್ನು ನೀಡಬೇಕು. ಅದಕ್ಕಾಗಿ ವೃಂದಾವನಸ್ಥರಾಗಬೇಕು. ಅವರು ದೇಹತ್ಯಾಗ ಮಾಡದೆಯೇ ಸಶರೀರರಾಗಿ ವೃಂದಾವನ ಪ್ರವೇಶ ಮಾಡಿದ್ದಾರೆ, ಆ ಬಳಿಕ ಅವರು ಒಂದು ರೂಪದಿಂದ ಅಲ್ಲಿ ಸನ್ನಿಹಿತರಾಗಿದ್ದು ಮತ್ತೊಂದು ರೂಪದಿಂದ ಬದರಿಯಲ್ಲಿ

ವೇದವ್ಯಾಸದೇವರ ಸನ್ನಿಧಿಯಲ್ಲಿಯೂ ಇದ್ದಾರೆ, ಅದೃಶ್ಯರಾಗಿ ಉಡುಪಿಯಲ್ಲಿದ್ದಾರೆ ಎಂದು ಒಪ್ಪೋಣ, ಏನು ಸಮಸ್ಯೆ ಇದೆ ಎಂದರೆ,

ಮೊದಲಿಗೆ ವೃಂದಾವನವಾಗಿದೆ ಎನ್ನುವದಕ್ಕೆ ಪ್ರಮಾಣವಿಲ್ಲ. ಆಚಾರ್ಯರು ಬದರಿಯಲ್ಲಿ ದೃಶ್ಯರಾಗಿ, ಉಡುಪಿಯಲ್ಲಿ ಅದೃಶ್ಯರಾಗಿ ಇದ್ದಾರೆ ಎನ್ನುವದಕ್ಕೆ ಶ್ರೀ ವಾದಿರಾಜರ ವಾಕ್ಯದ ಪ್ರಮಾಣವಿದೆ — **ಅದೃಶ್ಯೋ ರೂಪ್ಯಪೀಠೇಽಸ್ತಿ ದೃಶ್ಯೋಽಸ್ತಿ ಬದರೀತಟೇ** ಎಂದು.

ವೃಂದಾವನವಿದೆ ಎನ್ನುವದಕ್ಕೆ ಯಾವ ಪ್ರಾಚೀನ ಆಚಾರ್ಯರ ವಾಕ್ಯದ ಪ್ರಮಾಣವೂ ಇಲ್ಲ. ಸಮಗ್ರ ಮಾಧ್ವರೂ “ಆಚಾರ್ಯರು  ಬದರಿಗೆ  ತೆರಳಿ ಇಂದಿಗೂ ಸಶರರೀರಾಗಿಯೇ ಇಧ್ದಾರೆ”  ಎಂದೇ ಅಂದಿನಿಂದ ಇಂದಿನವರೆಗೆ ತಿಳಿಯುತ್ತಿದ್ದಾರೆ.

ಎನ್ನ ಎರಡನೆಯದು ಅತಿ ದೊಡ್ಡ ಸಮಸ್ಯೆ. ಆಚಾರ್ಯರು ಬದರಿಯಲ್ಲಿದ್ದಾರೆ ಶ್ರೀ ವೇದವ್ಯಾಸದೇವರ ಸೇವೆಯನ್ನು ಮಾಡಲು. ಉಡುಪಿಯಲ್ಲಿ ಅದೃಶ್ಯರಾಗಿ ಇದ್ದಾರೆ,

ಶ್ರೀಕೃಷ್ಣನನ್ನು ಅರ್ಚಿಸಲು. ಸಮಗ್ರ ಸಜ್ಜನರನ್ನು ಅನುಗ್ರಹಿಸಲು. ವೃಂದಾವನದಲ್ಲಿರುವದು ಯಾವ ಕಾರಣಕ್ಕೆ? ಅವರು ವೃಂದಾವನಸ್ಥರಾದರು ಎಂದರೆ ಒಂದು ಕಾರಣವಂತೂ ಇರಬೇಕಲ್ಲ.

ಶಿಷ್ಯರನ್ನು ಅನುಗ್ರಹ ಮಾಡಲಿಕ್ಕಾಗಿಯೇ ತಮ್ಮ ಅಧಿಷ್ಠಾನವನ್ನು ನೀಡಿ ಹೋಗಿದ್ದಾರೆ ಎಂದು ಒಪ್ಪಬಹುದಲ್ಲ ಎಂದರೆ, ಶಿಷ್ಯರ ಮೇಲಿನ ಅನುಗ್ರಹಕ್ಕಾಗಿ ಎಂದರೆ ಅಂದಿನಿಂದ ಇಂದಿನವರೆಗೆ ಯಾಕಾಗಿ ಅದರ ಕುರಿತು ಇಡಿಯ ಪರಂಪರೆಗೆ ತಿಳಿದಿಲ್ಲ? ಅಂದರೆ ಅಂದಿನಿಂದ ಇಂದಿನವರೆಗೆ ಆಗಿಹೋದ ಪರಂಪರೆಯ ಮಹಾನುಭಾವರ ಮೇಲೆ ಅವರಿಗೆ ಅನುಗ್ರಹ ಮಾಡಲು ಮನಸ್ಸಿಲ್ಲವೇ?

ಮತ್ತೂ, ನಿಶ್ಚಿತವಾಗಿ ಭಗವದಪರೋಕ್ಷಿಗಳು ಎಂದು ಇಡಿಯ ಪರಂಪರೆ ನಿರ್ವಿವಾದವಾಗಿ ಒಪ್ಪುವ ಶ್ರೀಮಟ್ಟೀಕಾಕೃತ್ಪಾದರು, ಶ್ರೀಮಚ್ಚಂದ್ರಿಕಾ-ಚಾರ್ಯರು, ಶ್ರೀ ವಾದಿರಾಜರು, ಶ್ರೀ ವಿಜಯೀಂದ್ರಸ್ವಾಮಿಗಳು, ಶ್ರೀರಾಘವೇಂದ್ರ-ಸ್ವಾಮಿಗಳು, ದಾಸರಾಯರು ಯಾರೂ ಸಹ

ಇದರ ಕುರಿತು ಹೇಳಿಲ್ಲ. ನಮ್ಮಲ್ಲಿ ಗುರುಗಳನ್ನು ಸ್ತೋತ್ರ ಮಾಡುವಾಗ ತುಂಗಾತೀರನಿವಾಸಿ, ಸ್ವಾದಿಪುರದೊಡೆಯ, ನರಸಿಂಹತೀರ್ಥನಿಲಯಂ ಶ್ರೀಪಾದರಾಜಮ್, ಎಂದೆಲ್ಲ ಸ್ತೋತ್ರ ಮಾಡುತ್ತಾರೆ.

ಶ್ರೀ ರಾಘವೇಂದ್ರಸ್ವಾಮಿಗಳ, ಶ್ರೀ ವಿಜಯೀಂದ್ರರ, ಶ್ರೀ ವಾದಿರಾಜರ, ಶ್ರೀಮಚ್ಚಂದ್ರಿಕಾಚಾರ್ಯರ, ಶ್ರೀ ಶ್ರೀಪಾದರಾಜರ, ಶ್ರೀ ಬ್ರಹ್ಮಣ್ಯತೀರ್ಥರ, ಶ್ರೀಮಟ್ಟೀಕಾಕೃತ್ಪಾದರ ವೃಂದಾವನಗಳ ಸೇವೆ ಇಂದಿಗೂ ಸರ್ವಾಭೀಷ್ಟವನ್ನು ಕರುಣಿಸುತ್ತವೆ. ಅಂತಹುದರಲ್ಲಿ ಶ್ರೀಮದಾಚಾರ್ಯರ ವೃಂದಾವನದ ಸೇವೆ ಮಹಾಫಲವನ್ನು ಕರುಣಿಸುವದರಲ್ಲಿ ಸಂಶಯವೇ ಇಲ್ಲ. ಆಂತಹ ಸರ್ವಶ್ರೇಷ್ಠ ವೃಂದಾವನದ ಬಗ್ಗೆ ನಮ್ಮ ಪ್ರಾಚಿನರಿಗೆ ಅರಿವೇ ಇರಲಿಲ್ಲ, ಅದರಲ್ಲಿಯೂ ನಮ್ಮನ್ನು ಸಂಸಾರದಿಂದ ಉದ್ಧರಿಸುವ ಮಹಾನುಭಾವರಿಗೇ ಆ ಅರಿವಿರಲಿಲ್ಲ ಎಂದು ಒಪ್ಪಬೇಕೆ?

ಇವರಿಗೆಲ್ಲ ಮಹಾವಿಸ್ಮೃತಿ ಇದೆ, ನಾವು ಮಾತ್ರ ತಿಳಿದಿದ್ದೇವೆ ಎನ್ನುವ ಸಾಹಸವನ್ನು ಇಂದಿನವರು ಮಾಡಬಹುದೇನೋ, ಆದೂ ಆಚಾರ್ಯರಿಗೆ

ಸಂಬಂಧಪಟ್ಟ ವಿಷಯದಲ್ಲಿ ಈ ರೀತಿಯ ಅಜ್ಞಾನ ನಮ್ಮ ಪ್ರಾಚೀನರಿಗಿತ್ತು ಎಂದು ಒಪ್ಪುವದಲ್ಲ ಹೇಳುವ ಸಾಹಸವನ್ನೂ ಸಾತ್ವಿಕ ಜನರು ಮಾಡುವದಿಲ್ಲ.

ಆಚಾರ್ಯರು ಶಿಷ್ಯರ ಮೇಲೆ ಅನುಗ್ರಹ ಮಾಡುವದಕ್ಕಾಗಿಯೇ ವೃಂದಾವನಸ್ಥರಾದರು ಎಂದು ಅವರೂ (ವೃಂದಾವನವಿದೆ ಎಂದು ವಾದಿಸುವವರು) ಒಪ್ಪಬೇಕು, ಬೇರೆ ಕಾರಣಗಳಿಲ್ಲ.

ಹಾಗೆ ಶಿಷ್ಯರ ಮೇಲೆ ಅನುಗ್ರಹ ಮಾಡುವದಕ್ಕೆ ವೃಂದಾವನಸ್ಥರಾಗಿದ್ದರೆ  ತಮಗೆ ಪರಮಪ್ರಿಯಶಿಷ್ಯರು ವಾಸವಿದ್ದ ಶ್ರೀಮದುಡುಪಿಯ ಕ್ಷೇತ್ರದಲ್ಲಿಯೇ, ಅಥವಾ ಶಿಷ್ಯರಿಗೆ ಸಮೀಪವಾದ ಮತ್ತೊಂದು ಸ್ಥಳದಲ್ಲಿಯೋ  ತಾವು ವೃಂದಾವನಸ್ಥರಾಗಿ ನಮ್ಮನ್ನು ಅನುಗ್ರಹಿಸುತ್ತಿದ್ದರು. ಜೀವನದಲ್ಲಿ ಒಮ್ಮೆಯಾದರೂ ಯಾತ್ರೆ ಮಾಡಲು ಅಸಾಧ್ಯವಾದ ಬದರಿಯಲ್ಲಿ ವೃಂದಾವನಸ್ಥರಾದ್ದಾರೆ, ಶಿಷ್ಯರನ್ನು ಅನುಗ್ರಹಿಸಲು ಎಂದು ಹೇಗೆ ಒಪ್ಪುವದು?

# ಮರಾಠೀಪುಸ್ತಕದ ಕುರಿತು

ಯಾವುದೇ ವ್ಯಕ್ತಿ ಏನೂ ಆಧಾರ ನೀಡದೆ ಒಂದು ಮಾತನ್ನು ಬರೆದ ಮಾತ್ರಕ್ಕೆ ಅದು ಪ್ರಮಾಣವಾಗಲು ಸಾಧ್ಯವಿಲ್ಲ. ತಮ್ಮ ತಪ್ಪು ತಿಳುವಳಿಕೆಯಿಂದ ಈ ರೀತಿಯಾದ ಸಾವಿರಾರು ತಪ್ಪುಗಳನ್ನು ಅನೇಕರು ಮಾಡುತ್ತಲೇ ಇದ್ದಾರೆ. ಶ್ರೀ ವಿದ್ಯಾರತ್ನಾಕರತೀರ್ಥಶ್ರೀಪಾದರು ಶ್ರೀಮದ್ ವ್ಯಾಸರಾಜಸಂಸ್ಥಾನದ ಪ್ರತಿಮೆಗಳ ಕುರಿತು ಹೇಳುತ್ತ "ಶುಕಗುರೋಃ ಮೂರ್ತಿಃ" ಎಂದು ಹೇಳಿದ್ದಾರೆ. ನೂರು ಜನ ವಾದಿಗಳನ್ನು ಏಕಕಾಲಕ್ಕೆ ಗೆದ್ದ ಶ್ರೀ ಶ್ರೀನಾಥತೀರ್ಥಶ್ರೀಪಾದರು ಪೂಜೆ ಮಾಡಿದ ದಿವ್ಯಸನ್ನಿಧಾನದ ವ್ಯಾಸಪ್ರತಿಮೆಯ ಬಗ್ಗೆ ಅವರು ಮಾತನಾಡುತ್ತಿದ್ದಾರೆ. ಶುಕಗುರು ಎಂದರೆ ವೇದವ್ಯಾಸದೇವರು. ವ್ಯಾಸಮೂರ್ತಿ ಎಂದರ್ಥ. ಆ ಶುಕಗುರು ಎನ್ನುವ ಶಬ್ದವನ್ನು ನೋಡಿ, ಗಿಳಿಯ ಮೂಗಿನ ಶುಕಾಚಾರ್ಯರ ಮೂರ್ತಿ ಎಂದು ಒಬ್ಬ ವ್ಯಕ್ತಿ ಬರೆದಿದ್ದರು. ಶುಕಾಚಾರ್ಯರದು ಮನುಷ್ಯ ಮುಖ, ಗಿಳಿಯ ಮುಖವಲ್ಲ ಎನ್ನುವದು ಆಚಾರ್ಯರ ನಿರ್ಣಯ. ಅಂತಹುದರಲ್ಲಿ ಗಿಳಿಯ ಮುಖದ ಪ್ರತಿಮೆ ಇದೆ ಎಂದು ಯಾರೋ ಬರೆದ

ಮಾತ್ರಕ್ಕೆ ಅದು ಪ್ರಮಾಣವಾಗುತ್ತದೆಯೇ. ಅಥವಾ, ಗಿಳಿಯ ಮುಖದ ಚಿತ್ರವನ್ನು ಯಾರೋ ಬರೆಸಿದ್ದಾರೆ, ಅದು ಪ್ರಮಾಣ ಎಂದು ಒಪ್ಪಲಾದೀತೆ. ಆಧಾರವಿದ್ದರೆ ಯಾರಾದರೂ ಬರೆದ ಮಾತಿಗೆ ಬೆಲೆಯೇ ಹೊರತು, ಆಧಾರವಿಲ್ಲದ ಮಾತಿಗೆ ಬೆಲೆಯಿಲ್ಲ.

ಅಷ್ಟು ಯಾಕೆ, ಇಡಿಯ ಭಾರತದಲ್ಲಿ ಪ್ರಸಿದ್ಧವಾದ ಛೋಪ್ರಾನ ಮಹಾಭಾರತದ ಹಿಂದಿಯ ಧಾರಾವಾಹಿ. ಅದರಲ್ಲಿ ಭೀಮನಿಗೆ ಮೀಸೆಯೇ ಇರಲಿಲ್ಲ. ವೇದವ್ಯಾಸದೇವರ ಮಹಾಭಾರತದಲ್ಲಿ ಭೀಮನಿಗೆ ಅದ್ಭುತವಾದ ಮೀಸೆಯಿತ್ತು ಎಂದು ಸ್ಪಷ್ಟವಾಗಿದೆ. ಛೋಪ್ರಾ ಧಾರಾವಾಹಿ ಮಾಡಿದ್ದಾರೆ ಎಂದು ಭೀಮನಿಗೆ ಮೀಸೆ ಇರಲಿಲ್ಲ ಎಂದು ಒಪ್ಪುತ್ತೀರೋ, ಮಹಾಭಾರತ ಬರೆದ ವೇದವ್ಯಾಸದೇವರ ಮಾತಿನ ಆಧಾರದಿಂದ ಭೀಮನಿಗೆ ಮೀಸೆ ಇತ್ತು ಎಂದು ಒಪ್ಪುತ್ತೀವೋ.

ಹೀಗೆ, ಯಾರೋ ಬರೆದ ಮಾತ್ರಕ್ಕೆ ಅದು ಪ್ರಮಾಣವಾಗಲು ಸಾಧ್ಯವಿಲ್ಲ. ಅವರು ಪ್ರಮಾಣ ನೀಡಬೇಕು. येथे मध्वाचार्यांचे वृंदावन आहे (ಇಲ್ಲಿ

ಶ್ರೀಮದಾಚಾರ್ಯರ ವೃಂದಾವನವಿದೆ) ಎಂಬ ಒಂದು ಹೇಳಿಕೆ ಪ್ರಮಾಣವಾಗುವದಿಲ್ಲ.

## ಅದು ವೃಂದಾವನ ಎಂದು ನಿಶ್ಚಯ ಮಾಡುವ ಕುರಿತು

ಡಾ| ರಾಘವೇಂದ್ರ ಕಟ್ಟಿಯವರು ಆ ವೃಂದಾವನ ನಮ್ಮ ಮಾಧ್ವ ವೃಂದಾವನಗಳ ಆಕಾರದಲ್ಲಿಯೂ ಇಲ್ಲ, Rectangular shape ನಲ್ಲಿದೆ, ನೋಡಿದವರಿಗೆ ಇದು ಸಮಾಧಿಯೆಂದು ಒಮ್ಮೆಲೇ ಲಕ್ಷ್ಯಕ್ಕೆ ಬರುವದಿಲ್ಲ ಎಂದು ತಿಳಿಸಿ ಹೀಗೆ ಬರೆಯುತ್ತಾರೆ — "ಆ ದಿನ ನಾವು **ಬಹುಶಃ ಮಧ್ವಾಚಾರ್ಯರ ಸಮಾಧಿ ಇರಬಹುದು ಎಂದು ಭಾವಿಸಿ** ನಮಗೆ ತಿಳಿದಂತೆ ಪೂಜೆ ಮಾಡಿ ತುಳಸೀಮಾಲೆಯನ್ನರ್ಪಿಸಿ ಬಂದೆವು"

ಸರ್ವಥಾ ಇದು ನಿರ್ಣಯ ಮಾಡುವ ಕ್ರಮ ಅಲ್ಲ. ಅದು ಸಮಾಧಿಯಾಗಿರಲಿ ಬಿಡಲಿ ನಮಗೆ ವಿವಾದವಿಲ್ಲ. ಹಿಮಾಲಯ ಹಿಂದಿನ ಕಾಲದಿಂದಲೂ ಸಾಧುಗಳ ತಾಣ. ಆ ರೀತಿಯಾದ ಸಾಧುಗಳು ದೇಹತ್ಯಾಗ ಮಾಡಿದ ಬಳಿಕ ಅದು

ಅವರ ಸಮಾಧಿಯಾಗಿರಬಗಹುದು. ಆದರೆ ಅದು ಶ್ರೀಮದಾಚಾರ್ಯರದೇ ಎಂದು ಹೇಗಾಗಲು ಸಾಧ್ಯ?

ನನಗೆ ಒಂದು ವಸ್ತುವನ್ನು ನೋಡಿ ಹೀಗನ್ನಿಸಿತು ಎಂದರೆ ಅದು ಪ್ರಮಾಣವಾಗಲು ಸಾಧ್ಯವೇ? ಆಧಾರವಿಲ್ಲದೇ ಏನನ್ನೂ ಒಪ್ಪಬಾರದು, ಆಧಾರವಿದ್ದರೆ ನಮ್ಮ ಪೂರ್ವಾಗ್ರಹವನ್ನು ಬಿಟ್ಟು ತತ್ವವನ್ನು ಒಪ್ಪಬೇಕು ಎನ್ನುವದೇ ನಮಗೆ ಶ್ರೀಮದಾಚಾರ್ಯರು ಕಲಿಸಿರುವ ಪಾಠ. ಟೀಕಾಕೃತ್ಪಾದರು ಹೇಳುತ್ತಾರೆ — ಮೊಲಕ್ಕೆ ಕೋಡಿದೆ ಎಂದೂ ಒಪ್ಪುತ್ತೇವೆ, ಪ್ರಮಾಣವಿದ್ದರೆ ಎಂದು. **ಅಂಗೀಕುರ್ಮಃ ಶಶವಿಷಾಣಮಪಿ, ಯದಿ ಪ್ರಾಮಾಣಿಕಂ ಸ್ಯಾತ್.**

ಹೀಗೆ, ಯಾವ ಪ್ರಾಚೀನ ಆಚಾರ್ಯರ ವಚನದ ಅಧಾರವೂ ಇಲ್ಲವಾದ್ದರಿಂದ ಮಠಾಧೀಪುಸ್ತಕವಾಗಲಿ, ಇವರ ಲೇಖನವಾಗಲೀ ನಮಗೆ ಪ್ರಮಾಣವಾಗುವದಿಲ್ಲ.

ಪ್ರಮಾಣವಾಗದೇ ಇರುವದಷ್ಟೇ ಅಲ್ಲ, ಶ್ರೀಮದಾಚಾರ್ಯರು ದೇಹತ್ಯಾಗ ಮಾಡಿಯೇ ಇಲ್ಲ, ಇನ್ನೂ ಸಶರೀರರಾಗಿ ಬದರಿಯಲ್ಲಿದ್ದಾರೆ, ಮೂವತ್ತಾರು ಸಾವಿರ ವರ್ಷಗಳ ನಂತರ ಮೂಲರೂಪದೊಂದಿಗೆ ಐಕ್ಯವನ್ನು ಹೊಂದುತ್ತಾರೆ ಎನ್ನುವ ಶ್ರೀ ವಾದಿರಾಜರ ವಚನದ ಸ್ಪಷ್ಟ ವಿರೋಧವಿದೆ. ನಮ್ಮ ಪರಂಪರೆಯ ಸಕಲ ಮಾಧ್ವರೂ  ಶ್ರೀಮದಾಚಾರ್ಯರು ಬದರಿಕಾಶ್ರಮ ಪ್ರವೇಶ ಮಾಡಿದ್ದಾರೆ ಎನ್ನುವ ವಿಷಯದಲ್ಲಿ ಐಕಮತ್ಯವನ್ನು ಹೊಂದಿದ್ದಾರೆ, ಆ ಐತಿಹ್ಯದ ವಿರೋಧವಿದೆ.

**ಇನ್ನು, ವಾದಿರಾಜರೂ ಸಹ ಏನೂ ಪ್ರಮಾಣ ನೀಡಿಲ್ಲ ಅದೂ ಅವರ ವಾಕ್ಯವೇ ತಾನೇ, ಅವರೇನೂ ಶೃತಿಸ್ಮೃತಿಗಳ ವಾಕ್ಯವನ್ನು ಪ್ರಮಾಣವನ್ನಾಗಿ ನೀಡಿಲ್ಲ, ಹಾಗೆಯೇ ಮರಾಠೀಪುಸ್ತಕವಾಗಲೀ, ಈ ಲೇಖನವಾಗಲೀ ಯಾವುದೇ ಶೃತಿ ಸ್ಮೃತಿಗಳನ್ನು ಪ್ರಮಾಣ ನೀಡದಿದ್ದರೂ ಪ್ರಮಾಣವೇ ಎಂದು ಯಾರಾದರೂ ವಾದಿಸುವದಾದರೆ ಅದಕ್ಕೆ ಉತ್ತರ —**

ನಮಗೆ ಶ್ರೀ ವಾದಿರಾಜರು ಮತ್ತು ಈ ಮರಾಠೀಪುಸ್ತಕ, ಕನ್ನಡಲೇಖನಗಳ ಮಧ್ಯದಲ್ಲಿ ಒಂದನ್ನು ಆರಿಸಿಕೊಳ್ಳುವ ಆಯ್ಕೆ ನೀಡಿದರೆ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು, ಅವನನ್ನು ವಿಧವಿಧವಾಗಿ ಸೇವಿಸಿ, ಅವನ ಪರಮಾನುಗ್ರಹವನ್ನು ಇಡಿಯ ಜೀವನದುದ್ದಕ್ಕೆ ಪಡೆದು, ಪರಮಾದ್ಭುತ ಗ್ರಂಥಗಳ ರಚನೆ ಮಾಡಿ, ಸಮಸ್ತ ವಾದಿಗಳ ಪ್ರಶ್ನೆಗಳಿಗೆ ದಿವ್ಯ ಉತ್ತರಗಳನ್ನು ನೀಡಿ, ಇಂದಿಗೂ ವೃಂದಾವನದಲ್ಲಿದ್ದು ಭಕ್ತರನ್ನು ಅನುಗ್ರಹಿಸುತ್ತಿರುವ, ಸ್ಮರಣೆ ಮಾತ್ರದಿಂದ ನಮ್ಮನ್ನು ಪುನೀತರನ್ನಾಗಿಸುವ ಶ್ರೀ ವಾದಿರಾಜರ ಮತವನ್ನೇ ನಾವು ಅನುಸರಿಸುತ್ತೇವೆ.

ಶ್ರೀ ವಾದಿರಾಜರ ಮಾತಿಗೆ ಬೇರೆಯೇ ಅರ್ಥ ಎಂದು ಪ್ರತಿಪಾದಿಸಿ, ಆಚಾರ್ಯರ ವೃಂದಾವನವಿದೆ ಎನ್ನುವದಕ್ಕೆ ನಿರವಕಾಶವಾದ ಪ್ರಮಾಣ ದೊರೆತರೆ ಆಗಲೂ ಪ್ರಾಮಾಣಿಕವಾದುದ್ದನ್ನೇ ಒಪ್ಪುತ್ತವೆಯೇ ಹೊರತು ಆಗ್ರಹ ಹಿಡಿಯುವದಿಲ್ಲ, ಹೊರತು ನಮಗೇನೋ ತೋರಿತು ಎಂದು ಪ್ರಮಾಣವಿಲ್ಲದೆಯೂ ತತ್ವವನ್ನು ಒಪ್ಪುವದಿಲ್ಲ.

## ಹಾಗಾದರೆ ಆ ವೃಂದಾವನ ಯಾರದಿರಬಹುದು

ಅದು ಮಾಧ್ವಸಂಪ್ರದಾಯದವರದೇ ವೃಂದಾವನ ಎಂದು ಪ್ರಬಲವಾದ ಆಧಾರದಿಂದ ನಿಶ್ಚಿತವಾದಲ್ಲಿ ಒಂದು ವಿಚಾರವನ್ನು ಮಾಡಬಹುದು.

ಶ್ರೀಮದಾಚಾರ್ಯರ ನೇರಶಿಷ್ಯರಾದ ಶ್ರೀ ಹೃಷೀಕೇಶತೀರ್ಥಾದಿ ಮಹಾನುಭಾವರು, ಕಾಶೀ, ಪ್ರಯಾಗ, ಕೃಷ್ಣಾತೀರ, ಧನುಷ್ಕೋಟಿ ಮುಂತಾದ ಪ್ರದೇಶಗಳಲ್ಲಿ ದೇಹತ್ಯಾಗ ಮಾಡಿದ ಯೋಗಿವರ್ಯರು.

ಇಂದಿನ ಶ್ರೀ ಕಾಣಿಯೂರು ಮಠದ ಮೂಲಪುರುಷರಾದ, ಆಚಾರ್ಯರ ಪ್ರೇಮದ ಶಿಷ್ಯರಾದ ಶ್ರೀ ರಾಮತೀರ್ಥರು ಹಿಮಾಲಯದಲ್ಲಿ ದೇಹತ್ಯಾಗವನ್ನು ಮಾಡಿದರು ಎಂದು ಕಾಣಿಯೂರು ಮಠದ ದಾಖಲೆಗಳು ತಿಳಿಸುತ್ತವೆ.

ಹೀಗಾಗಿ ಅದು ಮಾಧ್ವರದೇ ವೃಂದಾವನವಾದ ಪಕ್ಷದಲ್ಲಿ ಮಹಾನುಭಾವರಾದ ಶ್ರೀರಾಮತೀರ್ಥರ ವೃಂದಾವನವಾಗುವ ಸಾಧ್ಯತೆ ಇದೆ. ಆಚಾರ್ಯರ ವೃಂದಾವನ ಸರ್ವಥಾ ಅಲ್ಲ.

## ಕಡೆಯಲ್ಲೊಂದು ಮಾತು

ಶ್ರೀ ರಾಘವೇಂದ್ರ ಕಟ್ಟೆಯವರು ವೃದ್ಧರು. 82 ವರ್ಷದ ಈ ವೃದ್ಧಾಪ್ಯದಲ್ಲಿಯೂ ಉತ್ಸಾಹದಿಂದ ಇಂತಹುದೊಂದು ಕಾರ್ಯದಲ್ಲಿ ಪ್ರವೃತ್ತರಾಗಿದ್ದಾರೆ.

ತಾವು ತಮ್ಮ ನೌಕರಿಯಿಂದ ನಿವೃತ್ತರಾದ ಬಳಿಕ ಶಾಸ್ತ್ರದ ಅಧ್ಯಯನವನ್ನು ಮಾಡಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತಿದ್ದಾರೆ.

ಅಂತಹ ವೃದ್ಧರು ಏನೋ ಒಂದು ಹೊಸತನ್ನು ಹೇಳಿದಾಗ, ಅದಕ್ಕೆ ಶಾಸ್ತ್ರೀಯವಾದ ಉತ್ತರವನ್ನು ನೀಡುವ ಗೋಜಿಗೆ ಹೋಗದೆ ಅತೀ ಅಸಹ್ಯ ಶಬ್ದಗಳಿಂದ ಅವರನ್ನು ನಿಂದಿಸುತ್ತಿದ್ದಾರೆ. ಅಂತಹ ನಿಂದಕರಿಗೆ, ಆ ನಿಂದಕರನ್ನು ಪೋಷಿಸುತ್ತಿರುವವರಿಗೆ ನಿಂದೆಯಿಂದ ಅದೇನು ಸುಖ ದೊರೆಯುತ್ತದೆಯೋ ನಾ ಕಾಣೆ.

ಉತ್ತರ ನೀಡಲು ಸಾಧ್ಯವಿದ್ದರೆ ಉತ್ತರ ನೀಡಬೇಕು. ಇಲ್ಲವಾ ಸುಮ್ಮನಿರಬೇಕು. ನಿಂದೆ ಮಾಡುವದು ಮಾಧ್ವರ ಲಕ್ಷಣವಲ್ಲ.

ಮತ್ತೂ, ನಮ್ಮ ಮಧ್ವಶಾಸ್ತ್ರ ಅದ್ಭುತವಾದ ಶಾಸ್ತ್ರ. ಇವತ್ತಿನ ಪ್ರಶ್ನೆಗೆ ಶ್ರೀ ವಾದಿರಾಜರು ಅಂದೇ ಸರಸಭಾರತಿವಿಲಾಸದಲ್ಲಿ ಉತ್ತರ ಬರೆದಿಟ್ಟಿರುವದನ್ನು ಇಂದು ಕಣ್ಣಾರೆ ಕಾಣುತ್ತಿದ್ದೇವಲ್ಲ. ನಮ್ಮ ಪ್ರಾಚೀನರು ಬರೆದಿಟ್ಟುರುವ ಉತ್ತರವನ್ನೂ ತೆಗೆದು ನೀಡದೆ, ಪ್ರಶ್ನೆ ಮಾಡಿದವರನ್ನು, ಹೊಸತೊಂದನ್ನು ಹೇಳಿದವರನ್ನು ನಿಂದಿಸುವದು ಪಂಡಿತರ ಪ್ರವೃತ್ತಿಯಾಗಿರುವದು ಮಾಧ್ವರ ದುರಂತ.

ಶ್ರೀ ರಾಘವೇಂದ್ರ ಕಟ್ಟೆಯವರು ತಮ್ಮ ಲೇಖನದ ಅಂತ್ಯದಲ್ಲಿ ಅದೆಷ್ಟು ವಿನಮ್ರತೆಯಿಂದ ಹೇಳುತ್ತಾರೆ — **ನನ್ನ ಈ ಪ್ರಯತ್ನದಲ್ಲಿ ನನ್ನಿಂದ ಏನಾದರೂ ತಪ್ಪಾಗಿದ್ದರೆ, ನನ್ನಿಂದ ಶ್ರೀಮದಾಚಾರ್ಯರ ಗೌರವಕ್ಕೆ ಧಕ್ಕೆ ತಗಲಿದೆ ಎಂದು ಭಾವಿಸಿದರೆ ಅವರು ನನ್ನನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇನೆ** ಎಂದು.

ಇಷ್ಟು ವಿನಮ್ರವಾಗಿ ಮಾತನಾಡುವವರನ್ನೂ ನಿಂದಿಸಿ ಏನು ಪಡೆದಂತಾಯಿತು?

ನೀಡಲಿಕ್ಕಾದರೆ ಉತ್ತರ ನೀಡಿ. ನಿಂದೆ ಮಾಡಿ ಸಮುದಾಯಕ್ಕೆ ಅವಮಾನ ಮಾಡಬೇಡಿ.

— ವಿಷ್ಣುದಾಸ ನಾಗೇಂದ್ರಾಚಾರ್ಯ

Download Vishwanandini App
from Google Play Store

**www.vishwanandini.com**